## 2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕನಕಪುರ

## ಸಿ.ಸಿ. 1247/2025

**ಫಿರ್ಯಾದಿ** ः ರಾಜ್ಯ ಸರ್ಕಾರದ ಪರವಾಗಿ ಕನಕಪುರ ಗ್ರಾಮಾಂತರ ಪೋಲೀಸ್ ಠಾಣೆ.

**-ವಿರುದ್ಧ-**

**ಆರೋಪಿತರು** ः

1) ಅಂದಾನಿ ಬಿನ್ ಭೈರಯ್ಯ
56 ವರ್ಷ ವಯಸ್ಸು,

2) ಶಿವು ಬಿನ್ ಅಂದಾನಿ,
26 ವರ್ಷ ವಯಸ್ಸು,

3) ವಸಂತ ಬಿನ್ ಅಂದಾನಿ,
24 ವರ್ಷ ವಯಸ್ಸು,

ಎಲ್ಲರ ವಾಸಃ ಕೂನೂರು ಗ್ರಾಮ,
ಕಸಬಾ ಹೋಬಳಿ,
ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

**ದೋಷಾರೋಪಣೆ**

**ಶ್ರೀ ವಿನಯ್ ವಿಠ್ಠಲ್ ಕುಂದಾಪುರ್ ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕನಕಪುರ ಆದ ನಾನು, ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,**

ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ಕೂನೂರು ಗ್ರಾಮದ ಶಿವಕುಮಾರ್ ಎಂಬುವವರ ಮನೆಯಲ್ಲಿ ದಿನಾಂಕಃ 13.12.2024 ರಂದು ರಾತ್ರಿ 09.30 ಗಂಟೆ ಸಮಯದಲ್ಲಿ ಚಾಸಾ-2 ರವರು ಕೆಲಸ ಮಾಡುವಾಗ 1 ಮತ್ತು 2ನೇ ಆರೋಪಿಗಳಾದ ನೀವು ವಿನಾಃ ಕಾರಣ ಜಗಳ ತೆಗೆದು ಚಾಸಾ-1 ರವರಿಗೆ 1 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಕೈಯಿಂದ ಬೆನ್ನ ಮೇಲೆ ಹೊಡೆದು ಒಳನೋವುಂಟು ಮಾಡಿದ್ದು, ಆ ಮೂಲಕ ಭಾ.ನ್ಯಾ.ಸಂ ಕಲಂ 115(2) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ ಎಂದು ಹೇಳಲಾಗಿದೆ.

**ಎರಡನೆಯದಾಗಿಃ** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾಸಾ-2 ರವರಿಗೆ ಏಯ್ ಬೋಳಿ ಮಗನೇ, ಸೂಳೆ ಮಗನೇ ಎಂದು ಅವಾಚ್ಯವಾಗಿ ಬೈದಿದ್ದು, ಆ ಮೂಲಕ ಭಾ.ನ್ಯಾ.ಸಂ ಕಲಂ 352 ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ ಎಂದು ಹೇಳಲಾಗಿದೆ.

**ಮೂರನೆಯದಾಗಿಃ** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಚಾಸಾ-1 ರವರು ಮನೆಯ ಒಳಗೆ ಇರುವಾಗ 1 ಮತ್ತು 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರ ಮನೆಗೆ ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾ.ನ್ಯಾ.ಸಂ ಕಲಂ 329(4)

ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ ಎಂದು ಹೇಳಲಾಗಿದೆ.

**ಕೊನೆಯದಾಗಿಃ** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ಮತ್ತು 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ನ್ಯಾ.ಸಂ ಕಲಂ 351 ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ ಎಂದು ಹೇಳಲಾಗಿದೆ.

ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯ ವಿಚಾರಣೆಗೆ ಗುರಿಯಾಗುತ್ತಿದ್ದೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೀದ್ದೇನೆ.

**ಸಹಿ/-**
**2ನೇ ಅಪರ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ, ಕನಕಪುರ**

1. ಪ್ರಶ್ನೆ : ಈಗ ಓದಿ ಹೇಳಿದ ದೋಷಾರೋಪಣಾ ಸಾರಾಂಶ ಅರ್ಥವಾಯಿತೇ ?

ಉತ್ತರಃ 1ನೇ ಆರೋಪಿಃ

2ನೇ ಆರೋಪಿಃ

3ನೇ ಆರೋಪಿಃ

2. ಪ್ರಶ್ನೆ : ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿರಾ ಅಥವಾ ವಿಚಾರಣೆಯಾಬೇಕೆಂದು ಬಯಸುವಿರಾ ?

ಉತ್ತರಃ 1ನೇ ಆರೋಪಿಃ

2ನೇ ಆರೋಪಿಃ

3ನೇ ಆರೋಪಿಃ

(ಈ ಆರೋಪಣೆಯನ್ನು **ದಿನಾಂಕ 20-05-2026** ರಂದು ಆರೋಪಿತರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ ಅವರಿಂದ ಉತ್ತರ ಪಡೆದು ಉತ್ತರವನ್ನು ದಾಖಲಿಸಿದ್ದೇನೆ.)

**ಸಹಿ/-**
**2ನೇ ಅಪರ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ, ಕನಕಪುರ**

ಆರೋಪಿತರ ಸಹಿಃ

1.

2.

3.